ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಪರವಾಗಿ ಶ್ರೀ ವೈ.ಕೆ. ರಾಮಯ್ಯನವರು ಮಾತನಾಡುತ್ತಾರೆ. ಅವರು ಮೊದಲು ಮಾತನಾಡಲಿ, ನಂತರ ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ರಾಮನ ಬಗ್ಗೆ ಮಾತನಾಡುವುದಕ್ಕೆ ಅವರು ಹೆದರುತ್ತಾರೆ.

ಶ್ರೀ ಸಿ. ಬೈರೇಗೌಡ:– ನಾನು ರಾಮನಿಗೂ ಹೆದರುವುದಿಲ್ಲ, ಭೀಮನಿಗೂ ಹೆದರುವುದಿಲ್ಲ, ವಾಟಾಳ್ ನಾಗರಾಜು ಅವರಿಗೂ ಹೆದರುವುದಿಲ್ಲ.

ಉಪಾಧ್ಯಕ್ಷರು:– ಅಯೋಧ್ಯೆ ಘಟನೆ ಬಗ್ಗೆ ನಿನ್ನೆ ಅಪೂರ್ಣಗೊಂಡಿದ್ದ ಚರ್ಚೆ ಈಗ ಮುಂದುವರಿಯುವುದು. ಶ್ರೀ ವೈ.ಕೆ. ರಾಮಯ್ಯನವರು ಈಗ ತಮ್ಮ ಚರ್ಚೆ ಪ್ರಾರಂಭ ಮಾಡಬಹುದು.

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಮಾನ್ಯ ಉಪಾಧ್ಯಕ್ಷರೇ, ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ನಡೆದ ಮಸೀದಿ ಕೆಡವಿದ ಒಂದು ಘಟನೆ ಬಗ್ಗೆ ಈ ರಾಷ್ಟ್ರದ ಎಲ್ಲಾ ಮಾಧ್ಯಮಗಳು ಹಾಗೂ ಎಲ್ಲಾ ವೇದಿಕೆಗಳಲ್ಲಿ ಚರ್ಚೆಯಾಗಿದೆ. ಚರ್ಚೆಯಾಗುತ್ತಿದೆ. ಅದಕ್ಕೆ ಮೂಲ ಒಂದು ವಾದದ ಪ್ರಕಾರ, ಒಂದು ವರ್ಗದವರ ನಂಬಿಕೆ ಪ್ರಕಾರ ಕೆಡವಿದ ಮಸೀದಿ ಇರುವ ಜಾಗದಲ್ಲಿ ಒಂದು ಕಾಲದಲ್ಲಿ ಶ್ರೀರಾಮ ಹುಟ್ಟಿದ್ದ. ಅಲ್ಲಿ ಶ್ರೀರಾಮನ ದೇವಸ್ಥಾನ ಇತ್ತು. ಅದನ್ನು ಇತ್ತೀಚಿನ ವರ್ಷಗಳಲ್ಲಿ ಬಾಬರ್ ಬಂದ ಕಾಲದಲ್ಲಿ ದೇವಸ್ಥಾನವನ್ನು ಕೆಡವಿ ಮಸೀದಿಯನ್ನು ಕಟ್ಟಿದರು, ಆದುದರಿಂದ, ಆ ಮಸೀದಿಯನ್ನು ಕೆಡವಿ ಶ್ರೀರಾಮನ ದೇವಸ್ಥಾನವನ್ನು ಕಟ್ಟುತ್ತಿದ್ದೇವೆನ್ನುವ ವಾದ ನಮ್ಮ ಮುಂದೆ ಇದೆ. ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಒಬ್ಬ ವ್ಯಕ್ತಿ, ಯಾವುದೇ ಒಂದು ಸಂಸ್ಥೆ ಅಥವಾ ಯಾವುದೇ ಒಂದು ಪಕ್ಷ ಈ ರಾಷ್ಟ್ರ ಒಂದು ಜಾತಿ ಜನರಿಗೆ ಸೇರಿದ್ದುದು, ಒಂದು ಮತದ ಜನರಿಗೆ ಸೇರಿದ್ದುದು, ಒಂದು ವರ್ಗದ ಜನರಿಗೆ ಸೇರಿದ್ದುದು ಎನ್ನುವಂತಹ ವಾದ ಏನಾದರೂ ಇದ್ದರೆ ಆ ವಾದ ನನ್ನ ಪ್ರಕಾರ ಖಂಡನಾರ್ಹವಾದುದು. ಕಾರಣ, ಈ ರಾಷ್ಟ್ರದಲ್ಲಿ ಎಲ್ಲರೂ ಬದುಕಬೇಕು. ಬದುಕುವುದು ಅಷ್ಟೇ ಅಲ್ಲ ಎಲ್ಲರೂ ತಮ್ಮ ನಂಬಿಕೆ ಇಟ್ಟುಕೊಳ್ಳಬೇಕು ಎನ್ನುವ ಸ್ವಾತಂತ್ರ್ಯವನ್ನು 1956ರಿಂದಲೂ ಈ ರಾಷ್ಟ್ರದ ಸಂವಿಧಾನದಲ್ಲಿ ಅಳವಡಿಸಿಕೊಂಡು, ನಾವು ಅದನ್ನು ಪರಿಪಾಲನೆ ಮಾಡುತ್ತಾ ಬಂದಿದ್ದೇವೆ. ಕೇವಲ ಬದುಕುವುದಕ್ಕಷ್ಟೇ ಸ್ವಾತಂತ್ರ್ಯ ಅಲ್ಲ, ಬದುಕುತ್ತಿರುವ ಈ ಜನರಿಗೆ ಈ ರಾಷ್ಟ್ರದಲ್ಲಿ ತನ್ನದೇ ಆಗಿರತಕ್ಕ ನಂಬಿಕೆಯನ್ನು ಇಟ್ಟುಕೊಳ್ಳುವ ಸ್ವಾತಂತ್ರ್ಯ ಇದೆ. ಇಂತಹ ಸ್ವಾತಂತ್ರ್ಯವನ್ನು ಹೊಂದಿರುವ ಜಾತ್ಯಾತೀತತೆಯ ಸಂವಿಧಾನದಲ್ಲಿ ಈ ರಾಷ್ಟ್ರ ಹಿಂದೂಗಳಿಗೆ ಸೇರಿದ್ದು, ಈ ರಾಷ್ಟ್ರ ಜೈನರಿಗೆ ಸೇರಿದ್ದು, ಈ ರಾಷ್ಟ್ರ ಅಲ್ಪಸಂಖ್ಯಾತರಿಗೆ ಸೇರಿದುದು ಎನ್ನುವ ವಾದ ಖಂಡನಾರ್ಹವಾದುದು. ಈ ಹಿನ್ನೆಲೆಯಲ್ಲಿ 6ನೇ ತಾರೀಖು ನಡೆದ ಘಟನೆಯನ್ನು ಯಾವುದೇ ದೃಷ್ಟಿಯಿಂದ ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮತದ ಅಮಲು ಏರಿದ ಜನ, ಮತೀಯ ಭಾವನೆಯ ಪಿತ್ತ ಏರಿದ ಜನ ಹುಚ್ಚೆದ್ದು ಕುಣಿದಾಗ ಅದನ್ನು ನಿಯಂತ್ರಣ ಮಾಡತಕ್ಕ ವಿಶೇಷ ಅವಶ್ಯಕತೆ ಇದೆ ಎನ್ನುವುದನ್ನು ನಾವು ಚಿಂತನೆ

1.40 ಪಿ.ಎಂ

ಮಾಡಬೇಕಾಗಿದೆ. ಬಾಬರಿ ಮಸೀದಿಯನ್ನು ಕೆಡವಿದಂಥವರು ಯಾರೇ ಇರಬಹುದು. ಶಿವಸೇನೆಯವರು ಕೆಡವಿದ್ದಾರೋ, ಆರ್.ಎಸ್.ಎಸ್.ನವರು ಕೆಡವಿದ್ದಾರೋ, ವಿಶ್ವ ಹಿಂದೂ ಪರಿಷತ್ತಿನವರು ಕೆಡವಿದ್ದಾರೋ ಗೊತ್ತಿಲ್ಲ. ನಾವಂತೂ ಕಣ್ಣಾರೆ ನೋಡಿಲ್ಲ. ಆದರೆ ಅವರಿಗೆ ನನ್ನ ನೇರವಾದ ಪ್ರಶ್ನೆ ಇಷ್ಟೇ. ಕಾನೂನಿನ ದೃಷ್ಟಿಯಿಂದ ಇದು ಸರಿಯಾದುದೇ ? ರಾಷ್ಟ್ರದಲ್ಲಿರುವಂಥ ಎಲ್ಲಾ ವಿವಾದಗಳನ್ನು ಈ ರೀತಿ ಬಗೆಹರಿಸುವುದಕ್ಕೆ ಸಾಧ್ಯವೇ ? ಇದು ಬಹಳ ಪ್ರಮುಖವಾದಂಥ ಪ್ರಶ್ನೆ ? ಇವತ್ತು ಬಾಬರಿ ಮಸೀದಿ ಅಲ್ಲಿ ಇತ್ತು. ಆ ಸ್ಥಳದಲ್ಲಿ ಹಿಂದೆ ಶ್ರೀರಾಮ ದೇವಸ್ಥಾನ ಇತ್ತೆ,

ಜೈನರ ಬಸದಿ ಇತ್ತೆ, ಮಾರಮ್ಮನ ಗುಡಿ ಇತ್ತೆ, ಕೊಲ್ಲಾಪುರದಮ್ಮನ ಗುಡಿ ಇತ್ತೆ ? ಎನ್ನುವಂಥ ಒಂದು ವಿವಾದ ರಾಷ್ಟ್ರದ ಮುಂದೆ ಇದ್ದಾಗ ಅದನ್ನು ಸಂಬಂಧಪಟ್ಟವರು ಕಾನೂನನ್ನು ಕೈಗೆತ್ತಿಕೊಂಡು ನಾಶ ಮಾಡುವಂತಹ ಪ್ರವೃತ್ತಿ ಈ ರಾಷ್ಟ್ರಕ್ಕೆ ಒಳ್ಳೆಯದಲ್ಲ. ಇಂತಹ ವಿವಾದಗಳು ಬಂದಾಗ ಕಾನೂನಿನಿಂದ ಸರಿ ಮಾಡಬೇಕಾಗುತ್ತದೆ. ಅಥವಾ ಸಂಬಂಧಪಟ್ಟವರು ಕುಳಿತುಕೊಂಡು ಮಾತುಗಳನ್ನು ಆಡುವುದರಿಂದ ಸರಿಮಾಡಬೇಕಾಗುತ್ತದೆ. ಎರಡನ್ನೂ ಬಿಟ್ಟು ಕಾನೂನನ್ನು ಕೈಗೆತ್ತಿಕೊಂಡು ಬಾಬರಿ ಮಸೀದಿಯನ್ನು ಕೆಡವಿದಂತಹ ಕೃತ್ಯ ಬಹುಶಃ ಇಡೀ ರಾಷ್ಟ್ರ ವ್ಯಥೆ ಪಡುವಂಥಾದ್ದು ನಾಚಿಕೆ ಪಡುವಂಥಾದ್ದು. ಬಾಬರಿ ಮಸೀದಿಯನ್ನು ಪುಡಿಪುಡಿ ಮಾಡಿದ್ದೇವೆ ಎನ್ನುವಂಥ ವಿಷಯ ಹೆಮ್ಮೆ ಪಡುವಂತಹ ವಿಷಯ ಅಲ್ಲ. ಇದು ನನ್ನ ದೃಷ್ಟಿಯಲ್ಲಿ ಇಡೀ ರಾಷ್ಟ್ರದಲ್ಲಿ ನಾಚಿಕೆಗೇಡಿನ ಪ್ರಶ್ನೆ ಎಂದು ನಾನು ಭಾವಿಸಬೇಕಾಗುತ್ತದೆ. ಇದಕ್ಕೆ ಒತ್ತನ್ನು ಕೊಡುವುದಕ್ಕೆ ಅವರು ಪ್ರಯತ್ನ ಪಡುತ್ತಿದ್ದಾರೆ. ಇದನ್ನು ಮಾಡುವುದಕ್ಕೆ ಜನಗಳ ಮ್ಯಾನ್‌ಡೇಟ್ ಇತ್ತೇ, ಅನುಮತಿ ಇತ್ತೆ, ಎಂದು ಕೇಳುತ್ತಿದ್ದೇನೆ. ಅತ್ಯಂತ ಕನಿಷ್ಠ ಅನುಭವ ಇರುವವರು ಕೂಡ ಒಪ್ಪಿಕೊಳ್ಳುತ್ತಾರೆ. ಈ ರಾಷ್ಟ್ರದ ಜನ ನಮಗೆ ಓಟನ್ನು ಕೊಟ್ಟು ಕಳುಹಿಸುವುದು ಸರ್ಕಾರಗಳನ್ನು ಸ್ಥಾಪನೆ ಮಾಡುವುದು, ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ, ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ. ಓಟು ಕೊಟ್ಟು ಕಳುಹಿಸಿದ ಮಾತ್ರಕ್ಕೆ ಸರ್ಕಾರಗಳನ್ನು ರಚನೆ ಮಾಡಿದ ಮಾತ್ರಕ್ಕೆ ಸಂವಿಧಾನಕ್ಕೆ ವಿರುದ್ಧವಾಗಿ, ನಡೆದುಕೊಂಡು ಬಂದಿರುವಂತಹ ನಡವಳಿಕೆಗಳಿಗೆ ವಿರುದ್ಧವಾಗಿ ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲ. ಉತ್ತರ ಪ್ರದೇಶದ ಜನ ಬಿ.ಜೆ.ಪಿ. ಸರ್ಕಾರಕ್ಕೆ ಅನುಮತಿ ಕೊಟ್ಟಿದ್ದು ನಿಜ. ಜನರ ನೋವು ನಲಿವುಗಳನ್ನು, ಜನರ ಸಮಸ್ಯೆಗಳನ್ನು ಜನರ ದುಃಖ ದುಮ್ಮಾನಗಳನ್ನು ಬಗೆಹರಿಸುವುದಕ್ಕೆ ಹೊರತು ಯಾವುದೋ ಒಂದು ವಿಷಯದಲ್ಲಿ ಕಾನೂನನ್ನು ಕೈಗೆತ್ತಿಕೊಂಡು ನಾಶ ಮಾಡುವುದಕ್ಕೆ ಅಲ್ಲ. ಜನರು ಅವಕಾಶ ಕೊಟ್ಟಿದ್ದಾರೆ, ಮ್ಯಾನ್‌ಡೇಟನ್ನು ಕೊಟ್ಟಿದ್ದಾರೆ, ಆದುದರಿಂದ ಇದನ್ನು ಮಾಡಿದೆವು ಎಂಬ ವಾದ ಸರಿಯಾದುದಲ್ಲ, ಒಪ್ಪುವಂಥದ್ದು ಅಲ್ಲ. ಮತ್ತೊಂದು ವಿಷಯ ನನ್ನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಒಂದು ರಾಜಕೀಯ ಪಕ್ಷಕ್ಕೆ ದೇವಸ್ಥಾನ ಕಟ್ಟುವಂತಹ ಒಂದು ಕಾರ್ಯಕ್ರಮ ಸರಿಯಾದುದಲ್ಲ. ದೇವಸ್ಥಾನ ಕಟ್ಟುವುದಕ್ಕೆ ಬೇರೆಯವರು ಇದ್ದಾರೆ. ಭಕ್ತರು ಇದ್ದಾರೆ ಕಟ್ಟಿಕೊಳ್ಳುತ್ತಾರೆ. ಇದು ಒಂದು ವಿಶೇಷ. ಇವರು ದೇವಸ್ಥಾನ ಕಟ್ಟುತ್ತಿದ್ದಾರೆ. ಎಲ್ಲಾ ಹಿಂದುಗಳ ಪರವಾಗಿ ಕಟ್ಟುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಯಾರು ಇವರಿಗೆ ಈ ರೀತಿ ಹೇಳಿ ಎಲೆಕ್ಟ್ ಮಾಡಿ ಕಳುಹಿಸಿದವರು ? ಒಂದು ಸಮೀಕ್ಷೆಯ ಪ್ರಕಾರ ಆರನೇ ತಾರೀಖು ನಡೆದಂಥ ನಡವಳಿಕೆಗೆ ಒಪ್ಪುವಂಥ ಹಿಂದೂಗಳು ಸುಮಾರು ಶೇಕಡಾ 20ಕ್ಕಿಂತ ಕಡಿಮೆ. ಎಲ್ಲಾ ಹಿಂದೂಗಳ ಪರವಾಗಿ ಮಸೀದಿಯನ್ನು ಒಡೆಯುವುದಕ್ಕೆ, ದೇವಸ್ಥಾನ ಕಟ್ಟುವುದಕ್ಕೆ ಯಾರು ಇವರಿಗೆ ಪರವಾನಗಿ ಕೊಟ್ಟಿದ್ದಾರೆ ? ಬಹುಶಃ ಈ ಸದನದಲ್ಲಿರುವವರೆಲ್ಲರ ಪೈಕಿ ಮಸೀದಿಯನ್ನು ಒಡೆದು ದೇವಸ್ಥಾನ ಕಟ್ಟಬೇಕೆನ್ನುವ ಯಾವ ಹಿಂದೂವೂ ಇರಲಾರರು –ಮೂರು ನಾಲ್ಕು ಜನರನ್ನು ಬಿಟ್ಟು – ಎಂದು ನನ್ನ ಭಾವನೆ. How they have assumed our consent, how they have assumed our approval to destroy the Masjid and construct the temple? I am a Hindu by birth. I, myself, not agreeing for such an act.

ಪ್ರಭು ಶ್ರೀರಾಮಚಂದ್ರನ ಹೆಸರಿನ ದುರುಪಯೋಗದ ಇಚ್ಛೆ ನನಗೆ ಇಲ್ಲ. ಯಾವ ಹಿಂದೂ ಜನ ಈ ದೇವಸ್ಥಾನ ಕಟ್ಟಿ ಎಂದು ಹೇಳಿದ್ದಾರೆ ? ಆದುದರಿಂದ ಎಲ್ಲಾ ಹಿಂದೂಗಳ ಪರವಾಗಿ ಈ ಕೃತ್ಯ ಮಾಡಿದ್ದೇವೆ ಎಂದು ಹೇಳುವುದಾದರೆ ಒಬ್ಬ ಹಿಂದುವಾಗಿ ನಾನು ಇದಕ್ಕೆ ನಾಚಿಕೆ ಪಡುತ್ತೇನೆ. ಏತಕ್ಕೆಂದರೆ ವಿಶ್ವದ ಯಾವುದೇ ಒಂದು ಧರ್ಮ, ಒಬ್ಬ ಮಾನವ ಮತ್ತೊಬ್ಬ ಮಾನವನನ್ನು ಕೊಲ್ಲಬೇಕೆಂದು ಹೇಳುವುದಿಲ್ಲ. ವಿಶ್ವದ ಯಾವುದೇ ಧರ್ಮ ಹಿಂದೂ ಧರ್ಮ ಸೇರಿದಂತೆ ಒಬ್ಬ

ಮನುಷ್ಯ ಮತ್ತೊಬ್ಬ ಮನುಷ್ಯನನ್ನು ದ್ವೇಷ ಮಾಡಬೇಕು, ಕೊಲೆ ಮಾಡಬೇಕೆಂದು ಹೇಳುವುದಾದರೆ ಅಂಥ ಧರ್ಮಕ್ಕೆ ಧಿಕ್ಕಾರವಿರಲಿ. ಅಂಥ ಧರ್ಮ ರಾಷ್ಟ್ರದಲ್ಲೇ ಅಲ್ಲ, ಇಡೀ ವಿಶ್ವದಲ್ಲೇ ಇರುವ ಅವಶ್ಯಕತೆ ಇಲ್ಲ. ಅದನ್ನು ಮೆಚ್ಚುವ ಅವಶ್ಯಕತೆ ಇಲ್ಲ, ಅದನ್ನು ಅನುಸರಿಸುವಂತಹ ಅವಶ್ಯಕತೆ ಇಲ್ಲ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಹಿಂದೂ ಧರ್ಮದ ತಿರುಳು, ಹಿಂದೂ ಧರ್ಮದ ಮೂಲತತ್ವ ಪರಮತಸಹಿಷ್ಣುತೆ, ಅದನ್ನು ನಮ್ಮ ಮಿತ್ರರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಧರ್ಮದ ಹೆಸರಿನಲ್ಲಿ ಬಾಬರಿ ಮಸೀದಿಯನ್ನು ಕೆಡವುದಾದರೆ ಇದರ ಉದ್ದೇಶ ಹಿಂದೂಗಳ ಉದ್ಧಾರ ಅಲ್ಲ, ಹಿಂದೂ ಧರ್ಮದ ಉದ್ಧಾರ ಅಲ್ಲ. ಇದರ ಉದ್ದೇಶ ನನ್ನ ಪ್ರಕಾರ ರಾಜಕೀಯ ಉದ್ದೇಶ. ಮೂಲಭೂತವಾದಂತ ಪ್ರಶ್ನೆ, ಈ ವಿವಾದವನ್ನು ಕೈಗೆತ್ತಿಕೊಂಡಿರತಕ್ಕಂತವರ ಉದ್ದೇಶ ದೇವಸ್ಥಾನವನ್ನು ಕಟ್ಟುವುದು ಅಲ್ಲ. ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಬೇಕು ಅಂತ ನಕ್ಷೆ ತಯಾರಾಗಿರುವುದು, ಅದರ ಅಂದಾಜು ತಯಾರಾಗಿರುವುದು, ಅಮೃತ ಶಿಲೆಯಲ್ಲಿ ಕಟ್ಟಬೇಕು ಎಂದು. ಕಳೆದ ವರ್ಷ ಇಡೀ ರಾಷ್ಟ್ರದಲ್ಲಿ ಇಟ್ಟಿಗೆಗಳ ಮೆರವಣಿಗೆ ಆಯಿತು. ಒಂದೊಂದು ಇಟ್ಟಿಗೆಗೆ 50 ರೂಪಾಯಿಯಂತೆ ನಮ್ಮ ಜನ ಹಣ ಕೊಟ್ಟರು. ನಾವು ಈ ಸದನದ ಮುಖಾಂತರ ಈ ಜನರಿಗೆ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅಮೃತಶಿಲೆಯಲ್ಲಿ ದೇವಸ್ಥಾನವನ್ನು ಕಟ್ಟಿಸುತ್ತೇವೆ ಎಂದು ತೀರ್ಮಾನ ಮಾಡಿರುವಂತಹ ನಿಮಗೆ ಕುಣಿಗಲ್ ಇಟ್ಟಿಗೆ ಏತಕ್ಕೆ ? ಜಮ್ಮುವಿನ ಇಟ್ಟಿಗೆ, ತಿರುವನಂತಪುರದ ಇಟ್ಟಿಗೆ ಏಕೆ ? ತಮಿಳುನಾಡಿನ ಇಟ್ಟಿಗೆ ಏಕೆ ? ಆದ್ದರಿಂದ ಅವರು ಈ ದೇವಸ್ಥಾನಕ್ಕೆ ಇಟ್ಟಿಗೆ ತೆಗೆದುಕೊಂಡು ಹೋಗುತ್ತೇವೆಂದು ನಮ್ಮ ಜನರಿಗೆ ಮೋಸ ಮಾಡಿದ್ದಾರೆ. ಎರಡನೆಯದು ಈ ಇಟ್ಟಿಗೆ ಮೆರವಣಿಗೆ ರೂಪದಲ್ಲಿ ವಂತಿಕೆ ಬಂದಿರುವಂತಹ ಕೋಟ್ಯಾಂತರ ರೂಪಾಯಿಗಳ ಲೆಕ್ಕವನ್ನು ಈ ರಾಷ್ಟ್ರದ ಜನತೆಗೆ ಕೊಟ್ಟಿಲ್ಲ, ಈ ರಾಷ್ಟ್ರದ ಹಿಂದೂಗಳಿಗೆ ಕೊಟ್ಟಿಲ್ಲ. ಎಷ್ಟು ಕೋಟಿ ರೂಪಾಯಿಗಳು ಇಟ್ಟಿಗೆ ಮೆರವಣಿಗೆಯ ರೂಪದಲ್ಲಿ ಬಂದಿದೆ, ಇದರೊಳಗೆ ದೇವಸ್ಥಾನಕ್ಕೆ ಖರ್ಚಾದದ್ದು ಎಷ್ಟು ? ಚುನಾವಣೆಗಳಿಗೆ ಖರ್ಚಾದದ್ದು ಎಷ್ಟು ? ಇದರ ಮಾಹಿತಿಯನ್ನು ಈ ಜನ ರಾಷ್ಟ್ರದ ಮುಂದೆ ಈಗಲಾದರೂ ಕೊಡುತ್ತಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಜನಗಳ ಬಗ್ಗೆ, ಜನ ಎಂದರೆ ಒಂದು ವರ್ಗದವರಲ್ಲಿ ನಂಬಿಕೆವುಳ್ಳಂತಹ ಜನರ ಬಗ್ಗೆ ನನ್ನದೊಂದು ಪ್ರಶ್ನೆ. ನಾನು ಮಾನ್ಯ ಬಸವಲಿಂಗಪ್ಪನವರು ತೀರಿಕೊಳ್ಳುವುದಕ್ಕೆ ಎರಡು ಮೂರು ದಿವಸಗಳಿಗೆ ಮೊದಲು ಅವರನ್ನು ಭೇಟಿ ಮಾಡಿದಾಗ, ನಿಮಗೆ ಹಿಂದೂ ಧರ್ಮದ ಬಗ್ಗೆ ಇಂತಹ ಮನೋಭಾವ ಏಕೆ ಎಂದು ಕೇಳಿದೆ. ನಾನು ಅವರನ್ನು ಸ್ವಲ್ಪ ಹುಚ್ಚರು ಎಂದು ತಿಳಿದುಕೊಂಡಿದ್ದೆ. ಅವರು ಸ್ವಲ್ಪ ಒರಟಾಗಿ ಒಂದು ಮಾತನ್ನು ಹೇಳಿದರು.

"ಅಲ್ಲಯ್ಯಾ, ನಿಮ್ಮ ಹಿಂದು ದೇವಸ್ಥಾನಗಳಿಗೆ ಬರಬೇಡಿ ಎಂದು ಹೇಳುತ್ತೀರಿ, ಮಸೀದಿಗೆ ಹೋಗಬೇಡಿ ಎಂದು ಹೇಳುತ್ತೀರಿ" ಎಷ್ಟೊಂದು ಮಾರ್ಮಿಕವಾಗಿತ್ತು ಅವರ ಮಾತು ಎಂದರೆ ಇಡೀ ರಾಷ್ಟ್ರದ ಸಾಮಾಜಿಕ ವ್ಯವಸ್ಥೆ ಏನು ಇದೆ ಅದರ ಬಗ್ಗೆ ಎರಡೇ ಮಾತಿನಲ್ಲಿ ಹೇಳಿದರು. ಒಂದು ಕಡೆ ದೇವಸ್ಥಾನಗಳಿಗೆ ಬರಬೇಡಿ ಎಂದು ನಮ್ಮನ್ನು ಆಚೆಗೆ ತಳ್ಳುತ್ತೀರಿ, ಮತ್ತೊಂದು ಕಡೆ ಮಸೀದಿಗೆ ಹೋಗಬೇಡಿ ಎಂದು ಹೇಳುತ್ತೀರಿ. ಹಾಗಾದರೆ ನಾವೇನು ಮಾಡಬೇಕು ? ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಿಂದೂಗಳ ಉದ್ಧಾರ ಮಾಡುತ್ತೇವೆ, ಹಿಂದೂ ರಾಷ್ಟ್ರವನ್ನು ಕಟ್ಟುತ್ತೇವೆಂದು ವಾದ ಮಾಡುವಂಥ ಈ ಜನಕ್ಕೆ ಯಾರು ಹಿಂದೂಗಳು ? ಇಡೀ ರಾಷ್ಟ್ರದಲ್ಲಿರುವ ಎಲ್ಲಾ ಹಿಂದೂಗಳನ್ನು ಅವರು ಹಿಂದೂಗಳು ಎಂದು ಪರಿಗಣನೆ ಮಾಡುವುದಿಲ್ಲ. ಆ ರೀತಿ ಪರಿಗಣನೆ ಮಾಡುವುದಾಗಿದ್ದರೆ ದಿವಂಗತ ಬಸವಲಿಂಗಪ್ಪನವರು ಹೇಳಿದ ರೀತಿಯಲ್ಲಿ ದೇವಸ್ಥಾನಗಳಿಗೆ ಬರಬೇಡಿ ಎನ್ನುವ ವಾದವನ್ನು ಅವರು ಮಾಡುತ್ತಿರಲಿಲ್ಲ. ಇವತ್ತಿಗೂ ಇದು ಇದೆ. ಆದ್ದರಿಂದ ಹಿಂದೂಗಳನ್ನು ಉದ್ಧಾರ ಮಾಡುವ ಈ ಜನ ಒಂದು ವರ್ಗದ ಜನರನ್ನು ದೇವಸ್ಥಾನಗಳಿಗೆ ಬರಬೇಡಿ ಎಂದು

ಹೇಳುತ್ತಾರೆ. ಜನ ವಿಧಿಯಿಲ್ಲದೆ ಬೀದಿಪಾಲಾಗುವ ಸಂದರ್ಭದಲ್ಲಿ ಮಸೀದಿಗೆ ಹೋಗಬೇಡಿ ಎಂದು ಹೇಳುತ್ತಾರೆ. ಆದ್ದರಿಂದ ಹಿಂದೂಗಳ ಉದ್ಧಾರ ಮಾಡುತ್ತೇವೆಂದು ಹೇಳುವ ವಾದದಲ್ಲಿ ತಿರುಳಿಲ್ಲವೆಂದು ನಾವು ಭಾವಿಸುತ್ತೇವೆ.

ಸನ್ಮಾನ್ಯ ಅಧ್ಯಕ್ಷಣಿಯವರೇ, ಮತ್ತೊಂದು ವಿಷಯ ಈ ಶ್ರೀರಾಮ ಯಾರು ? ಅಯೋಧ್ಯೆಯಲ್ಲಿ ಹುಟ್ಟಿದನೇ, ಚಿಕ್ಕನಾಯಕನ ಹಳ್ಳಿಯಲ್ಲಿ ಹುಟ್ಟಿದನೇ, ಕುಣಿಗಲ್‌ನಲ್ಲಿ ಹುಟ್ಟಿದನೇ ? ನನ್ನ ಬಂಧುಗಳಲ್ಲಿ ಈ ಒಂದು ಪ್ರಶ್ನೆಯನ್ನು ಕೇಳಿಕೊಳ್ಳುತ್ತೇನೆ. ಶ್ರೀರಾಮನಿಗೆ ವಿಧಿಯಿಲ್ಲದೆ ನಾನು ಕೈ ಮುಗಿಯುತ್ತೇನೆ. ನಮ್ಮ ಮನೆಯಲ್ಲೂ ಒಂದು ಫೋಟೊ ಇಟ್ಟಿದ್ದಾರೆ. ಆದರೆ ಯಾವ ಶ್ರೀರಾಮನಿಗೆ ? ಆದೊಂದೇ ಕಾರಣಕ್ಕಾಗಿ, ಇನ್ನೇನು ಅವನು ಅನಾಚಾರ ಮಾಡಲಿಲ್ಲ ಅಪಚಾರ ಮಾಡಿಲ್ಲ ಅನ್ಯಾಯ ಮಾಡಲಿಲ್ಲ ಕೊಲೆಸುಲಿಗೆಗಳನ್ನು ಮಾಡಲಿಲ್ಲ. ನೀನು ಹುಟ್ಟಿದ ಒಂದೇ ಒಂದು ಕಾರಣಕ್ಕಾಗಿ ನೀನು ಈ ಭೂಮಿ ಮೇಲೆ ತಪಸ್ಸು ಮಾಡುವ ಯೋಗ್ಯತೆ ನಿನಗಿಲ್ಲ, ನಿನಗೆ ಅಧಿಕಾರ ಇಲ್ಲ ಎಂದು ಶೂದ್ರ ತಪಸ್ವಿಯನ್ನು ಕೊಂದಂತಹ ಶ್ರೀರಾಮನಿಗೆ ನಾನು ಕೈಮುಗಿಯಲಿಕ್ಕೆ ಸಿದ್ಧನಿಲ್ಲ. ಅಂತಹ ಶ್ರೀರಾಮನಿಗೆ ದೇವಸ್ಥಾನ ಕಟ್ಟುವ ನೆಪದಲ್ಲಿ ಇಡೀ ರಾಷ್ಟ್ರಕ್ಕೆ ಬೆಂಕಿ ಹಚ್ಚುವ ಅವಶ್ಯಕತೆ ಇಲ್ಲ. ವಾಲಿ ಸುಗ್ರೀವರ ಕಥೆಯಲ್ಲಿ ಕದ್ದು ತಮ್ಮನನ್ನು ಕೊಂದಂತಹ ಶ್ರೀರಾಮನಿಗೆ ಕೈಮುಗಿಯುವ ಅವಶ್ಯಕತೆ ಇಲ್ಲ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ, ಶ್ರೀರಾಮನ ದೇವಸ್ಥಾನ ಕಟ್ಟುವಂತಹ ಜನರಿಗೆ, ಹಿಂದೂಧರ್ಮದ ಉದ್ಧಾರದ ಗುತ್ತಿಗೆ ತೆಗೆದುಕೊಂಡಿರುವ ಜನರಿಗೆ ಕಳಕಳಿಯಿಂದ ಈ ಹಂತದಲ್ಲಿ ನನ್ನ ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದು ಕೇವಲ ದೇವಸ್ಥಾನ ಮಸೀದಿಯ ಪ್ರಶ್ನೆಯಲ್ಲ, ವೈಚಾರಿಕತೆಯ ಗತ್ತಿನಲ್ಲಿಯೂ ವಿಚಾರವಂತಿಗೆಯನ್ನು ನಾಶ ಮಾಡಿ ಜನರನ್ನು ಮತ್ತೆ ಮೌಢ್ಯಕ್ಕೆ ತೆಗೆದುಕೊಂಡು ಹೋಗುವಂತಹ ಒಂದು ಚಾಣಾಕ್ಷತನ ಇದು. ಮತ್ತೆ ಮತೀಯ ಅಫೀಮನ್ನು ಸೇವಿಸಿ ಮತದ ಪಿತ್ತವನ್ನು ಏರಿಸಿ ವೈಚಾರಿಕತೆಯನ್ನು ನಾಶಮಾಡಿ ಮೌಢ್ಯಗಳಿಗೆ ಕೊಂಡೊಯ್ಯುವಂತಹ ಅಡ್ಡದಾರಿ ಇದು. ಈ ಒಂದು ಚಾಣಾಕ್ಷತನ ಬಹುಶಃ ಹಿಂದಿನಿಂದಲೂ ನಡೆದುಬಂದಿದೆ. ಆದ್ದರಿಂದ ಮಂದಿರ ಮಸೀದಿಗಳ ನೆಪದಲ್ಲಿ ಹಿಂದೂರಾಷ್ಟ್ರದ ಸ್ಥಾಪನೆಯ ಕನಸಿನಲ್ಲಿ ಈ ರಾಷ್ಟ್ರದ ವೈಚಾರಿಕತೆಯ ಏನು ಆಂದೋಲನ ಇತ್ತೀಚಿನ ದಿವಸಗಳಲ್ಲಿ ನಡೆಯುತ್ತಿದೆಯೋ ಅದನ್ನು ನಾಶಮಾಡಿ ಜನರನ್ನು ದಯಮಾಡಿ ಮೌಢ್ಯದ ಕಡೆ ತೆಗೆದುಕೊಂಡು ಹೋಗಬೇಡಿ ಎಂದು ನನ್ನ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ನಮಗೆ ಅರ್ಥವಾಗದಿರುವ ಅನೇಕ ವಿಷಯಗಳಿವೆ. ಶ್ರೀರಾಮನ ದೇವಸ್ಥಾನ ಏಕೆ ಕಟ್ಟಬೇಕು ಇವರು ? ಅದು ಅಯೋಧ್ಯೆಯಲ್ಲೇ ಏಕೆ ಹೋಗಿ ಕಟ್ಟಬೇಕು, ನಮ್ಮ ಮಾರಮ್ಮನ ದೇವಸ್ಥಾನ ಕಟ್ಟಲು ಇವರಿಗೆ ಏಕೆ ಆಸಕ್ತಿ ಇಲ್ಲ. ಕೊಲ್ಲಾಪುರದಮ್ಮನ ದೇವಸ್ಥಾನ ಕಟ್ಟಲಿಕ್ಕೆ ಏಕೆ ಆಸಕ್ತಿ ಇಲ್ಲ.

ಶ್ರೀ ಸಿ.ಬೈರೇಗೌಡ:– ಮಾರಮ್ಮನ ದೇವಸ್ಥಾನ ಏಕೆ ಕಟ್ಟೋದಿಲ್ಲ ಅಂದರೆ ಅವಳು ಮಾಂಸ ತಿಂತಾಳೆ, ಅದರಿಂದ. ಮಾಂಸ ತಿನ್ನೋ ದೇವರನ್ನು ಬಿಟ್ಟು ಮನುಷ್ಯರನ್ನು ತಿನ್ನೋ ದೇವಸ್ಥಾನ ಕಟ್ಟಬೇಕೆಂಬುದು ಅವರ ಉದ್ದೇಶ.

ಶ್ರೀ ವಾಟಾಳ್ ನಾಗರಾಜ್:– ಮಾಂಸಾನೂ ಬೇಡ, ಮನುಷ್ಯಾನು ಬೇಡ ತರಕಾರಿ ತಿನ್ನುವ ದೇವರ ದೇವಸ್ಥಾನ ಕಟ್ಟೋಣ.

ಶ್ರೀ ವೈ.ಕೆ. ರಾಮಯ್ಯ:– ಮೂಢನಂಬಿಕೆಗಳನ್ನು ಮರೆತು ವೈಚಾರಿಕ ಯುಗದಲ್ಲಿ ನಾವು [illegible]ತುವಂತಹ ಸಂದರ್ಭದಲ್ಲಿ ದೇವರ ಹೆಸರನ್ನು ಹೇಳಿ ಮತದ ಹೆಸರನ್ನು ಹೇಳಿ ಮೌಢ್ಯಕ್ಕೆ ನಮ್ಮನ್ನು [illegible]ಯ್ಯುವಂತಹ ಈ ಜನರ, ನಡವಳಿಕೆ ಪ್ರವೃತ್ತಿ ಏನಿದೆ ಇದು ಕೇವಲ ಒಂದು ಮಸೀದಿಯ ಸ[illegible]ವಿಷಯವಲ್ಲ, ಒಂದು ದೇವಸ್ಥಾನದ ಉದ್ಧಾರದ ವಿಷಯವಲ್ಲ, ಇಡೀ ಜನಾಂಗದ ಬದುಕಿನ

ಮೇಲೆ ಕೆಟ್ಟ ಪ್ರಭಾವವನ್ನು ಬೀರುವಂತಹ ಒಂದು ನಡವಳಿಕೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ನಿನ್ನೆ ನನ್ನ ಮಿತ್ರರು ಮಾತನಾಡುವಾಗ ಜಾತಿ ಹೆಸರಿನಲ್ಲಿ ಮತದ ಹೆಸರಿನಲ್ಲಿ ಯಾರಾದರೂ ರಾಜಕೀಯ ಮಾಡಿ ತನ್ಮೂಲಕ ಅಧಿಕಾರಕ್ಕೆ ಹೋಗುವಂತಹ ಪ್ರಯತ್ನ ಮಾಡಿದರೆ ಅದು ಖಂಡನಾರ್ಹ ಎಂದು ಹೇಳಿದರು. ಮತ್ತೆ ಇನ್ನಾವ ಉದ್ದೇಶಕ್ಕಾಗಿ ಅದು ? ರಾಜಕೀಯ ಉದ್ದೇಶ ಬಿಟ್ಟು ಒಂದು ರಾಜಕೀಯ ಪಕ್ಷಕ್ಕೆ ಬೇರೆ ಉದ್ದೇಶ ಏನಿದೆ ? It is a political party, recognised by the Election Commission. Their main aim is to accept the position. I agree with them; It is the aim of all the political parties. But the means you have to fight. ಈ ದೇಶದ ಜಾತ್ಯಾತೀತ ತತ್ವಕ್ಕೆ ಪರಮತ ಸಹಿಷ್ಣುತೆಗೆ ಈ ರಾಷ್ಟ್ರದ ಸಂವಿಧಾನದಲ್ಲಿ ನಡೆದುಕೊಳ್ಳಲೇಬೇಕಾದ ತತ್ವಗಳಿಗೆ ಬೆಂಕಿ ಹಚ್ಚಿ ಆ ಬೆಂಕಿಯ ಉರಿಯಲ್ಲಿ ಮೈಕಾಯಿಸಿಕೊಳ್ಳುವ ತೀಟೆ ತೀರಿಸಿಕೊಳ್ಳುವ ನೋವನ್ನು ಕಡಿಮೆ ಮಾಡಿಕೊಳ್ಳುವಂತಹ ನಡವಳಿಕೆ ಏನಿದೆ ಇದನ್ನು ನಾವ್ಯಾರು ಮೆಚ್ಚುವಂತಹದಲ್ಲ. ಇದರ ಜೊತೆಗೆ, ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇಂಥ ಹಿಂದೂರಾಷ್ಟ್ರದ ಕಲ್ಪನೆ, ಪರಿಕಲ್ಪನೆ ನಮಗೆ ಕಲ್ಪಿಸಿಕೊಂಡರೂ ಕೂಡ ಜೀವ ನಡುಕ ಬರುತ್ತದೆ. ಈ ರಾಷ್ಟ್ರ ಒಂದು ಜನಾಂಗಕ್ಕೆ ಸೇರಿತೊ, ಹಿಂದೂಗಳಿಗೆ ಸೇರಿತೋ, ಮಹಮದೀಯರಿಗೆ ಸೇರಿತೋ, ಕ್ರಿಶ್ಚಿಯನ್ನರಿಗೆ ಸೇರುವ ಒಂದು ನಂಬಿಕೆ ಏನು ಇದೆ, ಇದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ನನ್ನ ದೃಷ್ಟಿಯಿಂದ ಈ ಪರಿಕಲ್ಪನೆ Itself is a crime. ಈ ಸದನದಲ್ಲಿ ಇರುವವರು ವಿಶ್ವಕ್ಕೆಲ್ಲಾ ಬೇಕಾಗಿಲ್ಲ. ಎಲ್ಲರ ಮೈಯನ್ನು ಚುಚ್ಚಿಕೊಂಡು ಬಂದರೂ ಕೂಡ ರಕ್ತ ಕೆಂಪಗೆ ಬರುತ್ತದೆಯೇ ಹೊರತು ಯಡಿಯೂರಪ್ಪನವರ ಮೈಯಲ್ಲಿ ಕಪ್ಪಗೆ, ರಾಮಯ್ಯನವರ ಮೈಯಲ್ಲಿ ಕೆಂಪಗೆ, ನಮ್ಮ ಸಾದತ್ ಆಲಿ ಅವರ ಮೈಯಲ್ಲಿ ನೀಲಿ ಬಣ್ಣದ ರಕ್ತ ಬರುವುದಕ್ಕೆ ಸಾಧ್ಯವಿಲ್ಲ. ಈ ಸತ್ಯ, ಈ ನಿತ್ಯಸತ್ಯ ಕಣ್ಣಿಲ್ಲದೇ ಇರತಕ್ಕಂಥ ಕುರುಡರಿಗೆ ಗೊತ್ತಾಗುತ್ತದೆ. ಆದರೆ ಕಣ್ಣಿರುವಂಥ ನಂಬಿಕೆಯುಳ್ಳಂಥ ನಮ್ಮ ಜನರಿಗೆ ಇದು ಗೊತ್ತಾಗುವುದಿಲ್ಲ. 'ಮತಾಂಧರಿಗೆ ಅಂಧರು ತೋರಿದ ದಾರಿ'– ಮತಾಂಧರು ಎನ್ನುವ ಪದ ಉಪಯೋಗಿಸುವಾಗ ಸ್ವಲ್ಪ ಅದು ಒರಟಾಗಿ ಕಂಡರೂ ಅರ್ಥ ಏನು ಅಂಥ ಕೆಟ್ಟದ್ದಲ್ಲ. ಮತೀಯ ಭಾವನೆಗಳಿಂದ ನಾನು ಆಗಲೇ ಹೇಳಿದ ಹಾಗೆ ಮತೀಯ ಭಾವನೆ ಎಂಬ ರಾಮರಸದಿಂದ ಪಿತ್ತ ನೆತ್ತಿಗೇರಿದಾಗ ಕಣ್ಣು ಕಾಣಿಸುವುದಿಲ್ಲ. ಪಿತ್ತ ಜಾಸ್ತಿಯಾದರೆ. ಈ ಮತೀಯ ಭಾವನೆಯಿಂದ ಪಿತ್ತ ನೆತ್ತಿಗೇರಿ ಕುರುಡರಾಗಿರುವಂಥ ಜನರಿಗೆ ಕಣ್ಣಿಲ್ಲದ ಕುರುಡರಿಗೆ ಗೊತ್ತಿರುವಂಥ ಸತ್ಯದ ಅರಿವು ಕೂಡ ಆಗದೇ ಇರುವುದು ದುರದೃಷ್ಟಕರ. ಮೊನ್ನೆ ಅಂಧರದೇ ಒಂದು ಸಭೆಯಲ್ಲಿ ಅವರು ಕಣ್ಣಿಲ್ಲದ ಕುರುಡರು. ಕಣ್ಣುಳ್ಳಂಥ ಈ ಕುರುಡರಿಗೆ ಹೇಳಿರುವ ಎರಡು ವಾಕ್ಯಗಳನ್ನು ಈ ಸಭೆಯ ಮುಖಾಂತರ, ತಮ್ಮ ಮುಖಾಂತರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ''ಮನುಷ್ಯ ಜಾತಿ ತಾನೊಂದೆವಲಂ'', ಸದ್ಭೋಧನೆಯನ್ನು ಮರೆತು ಸರ್ವಧರ್ಮ ಸಮನ್ವಯಕ್ಕೆ ಹೆಸರಾದ ಈ ಪುಣ್ಯಕ್ಷೇತ್ರವನ್ನು ಮಂದಿರ ಮಸೀದಿಗಳ ಹೆಸರಿನಲ್ಲಿ ಕುರುಕ್ಷೇತ್ರವನ್ನೇಕೆ ಮಾಡುವಿರಿ ? ಜಾತಿ ಮತ ಪಂಥಗಳ ತೊರೆದು ಭಾವೈಕ್ಯ ಬೀಜಕ್ಕೆ ನೀರು ಗೊಬ್ಬರವನ್ನು ಎರೆದು ಸಮಸಮಾಜವನ್ನು ಕಟ್ಟೋಣ ಬನ್ನಿ. ಸುಟ್ಟ ಮನೆಗಳ ಮುಂದೆ ನಿಂತ ನಿರ್ಗತಿಕರಲ್ಲಿ, ತಾಯಿತಂದೆಯರನ್ನು ಕಳೆದುಕೊಂಡ ಎಳೆಗೂಸುಗಳ ಮುಖದಲ್ಲಿ ರಾಮ ರಹೀಮ ಸಿಗಲಿಲ್ಲ. ರಾಮನೆಂದರೆ ರಹೀಮ. ರಹೀಮನೆಂದರೆ ರಾಮ. ದೇವರೆಂದಾದರೂ ನಿಮ್ಮ ಬಳಿ ಬಂದು ಅಯೋಧ್ಯೆಯ ಇಂಥ ಸ್ಥಳದಲ್ಲಿಯೇ ನೆರಳುಬೇಕೆಂದು ಕೇಳಿದ್ದನೇ ? ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ರಾಜಕಾರಣವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಏನಾದರೂ ಮಾಡಿ ಅಧಿಕಾರಕ್ಕೆ ಹೋಗಬೇಕು. ಯಾವುದಾದರೂ ರೂಪದಲ್ಲಿ ಅಧಿಕಾರಕ್ಕೆ ಹೋಗಬೇಕು ಎನ್ನುವ ಒಂದು ಭಾವನೆ ಏನಿದೆ, ಈ ಭಾವನೆಯಿಂದ ರಾಮನ ಹೆಸರನ್ನು ಹೇಳಿಕೊಂಡು ರಾಜಕೀಯ ಮಾಡುವಂಥ ಈ ಜನ ಈ ರಾಷ್ಟ್ರಕ್ಕೆ ಕಳಂಕವನ್ನು ತಂದಿದ್ದಾರೆ. ಕಣ್ಣಿಲ್ಲದ ಕುರುಡರಿಗೆ ಕಾಣುವಂತ ಸತ್ಯ ಕಣ್ಣುಳ್ಳಂಥ

ಈ ಕುರುಡರಿಗೆ ಕಾಣದೇ ಇರುವುದು ದುರದೃಷ್ಟಕರ ಎಂದು ನಾನು ಭಾವಿಸಿಕೊಳ್ಳುತ್ತೇನೆ. 6ನೇ ತಾರೀಖು, ನಡೆದಂಥ ಘಟನೆಗೆ ನಾನು ಈಗಾಗಲೇ ಹೇಳಿದ ಹಾಗೆ ಯಾವುದೋ ಒಂದು ಪಕ್ಷ, ಯಾವುದೋ ಒಂದು ಸಂಸ್ಥೆ, ಅಥವಾ ಯಾವುದೋ ಒಬ್ಬ ವ್ಯಕ್ತಿಯನ್ನು ನಾನು ಗುರಿಮಾಡುವುದಕ್ಕೆ ಸಾಧ್ಯವಿಲ್ಲ. ಈ ಸದನದಲ್ಲಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಕೆಲವು ವಿಷಯಗಳು ನನ್ನ ಗಮನಕ್ಕೆ ಬಂತು. ಅದನ್ನು ನೋಡಿದಾಗ ಒಂದು ತೀರ್ಮಾನಕ್ಕೆ ನಾನು ಬಂದೆ. ಈ ನಂಬಿಕೆ ಇದು ಪಕ್ಷಕ್ಕೆ ಸೀಮಿತವಾಗಿಲ್ಲ. ಎಲ್ಲಾ ಪಕ್ಷದಲ್ಲಿಯೂ ಬಿಜೆಪಿಯವರು ಇದ್ದಾರೆ, ಕಾಂಗ್ರೆಸ್‌ನಲ್ಲೂ ಬಿಜೆಪಿಯವರು ಇದ್ದಾರೆ. ಅವರು ಗುಟ್ಟಾಗಿ ಒಪ್ಪಿಕೊಳ್ಳುತ್ತಾರೆ. ಅವರು ಮಸೀದಿ ಕೆಡವಿದ್ದು ಕರೆಕ್ಟ್ ಎಂದು ಹೇಳುವವರು ಇದ್ದಾರೆ. ಜನತಾದಳದಲ್ಲೂ ಜನತಾಪಕ್ಷದಲ್ಲೂ ಬಿಜೆಪಿಯವರು ಇದ್ದಾರೆ. ಕಾಂಗ್ರೆಸ್‌ನಲ್ಲಿ 6ನೇ ತಾರೀಖು ನಡೆದಂಥ ಘಟನೆ .....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಇವರು ಮಾತ್ರ ಬಿಜೆಪಿ ಅವರು ಅಲ್ಲ. ನಮ್ಮಲ್ಲಿ ಬಿಜೆಪಿಯವರು ಇದ್ದಾರೆ, ಅವರಲ್ಲೂ ಬಿಜೆಪಿಯವರು ಇದ್ದಾರೆ ಎಂದು ಹೇಳುತ್ತೀರಿ.

ಶ್ರೀ ವೈ.ಕೆ. ರಾಮಯ್ಯ:– ನಮ್ಮಲ್ಲೂ ಇದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ನಾನು ಏನು ಹೇಳುವುದು, ಯಾರು ಇದ್ದಾರೆ ಅದನ್ನು ಹೇಳಿಬಿಡುವುದು ಒಳ್ಳೆಯದು. ಅದನ್ನು ಮೊಗಂಆಗಿ ಏತಕ್ಕೆ ಹೇಳುತ್ತೀರಿ ? ಯಾರು ಇದ್ದಾರೆ, ಅವರ ಹೆಸರನ್ನು ಹೇಳಿಬಿಡಿ. ಸುಮ್ಮನೆ ಅಲ್ಲಿದ್ದಾರೆ, ಇಲ್ಲಿದ್ದಾರೆ, ಅದು ಏತಕ್ಕೆ ಬೇಕು ?

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷೆಣಿಯವರೇ, ನನ್ನ .....

ಉಪಾಧ್ಯಕ್ಷರು:– ರಾಮಯ್ಯನವರೇ, ಎರಡು ಗಂಟೆಯಾಗಿದೆ. ಅಡ್ಜರ್ನ್ ಮಾಡಿ ಬಿಡೋಣ. ಆಮೇಲಿಂದ ತಾವು ಕಂಟಿನ್ಯೂ ಮಾಡಬಹುದು.

ಶ್ರೀ ವೈ.ಕೆ. ರಾಮಯ್ಯ:– ಅವರು ಹೇಳಿದ್ದಕ್ಕೆ ಮಾತ್ರ ಒಂದು ಮಾತು ಹೇಳಿಬಿಡುತ್ತೇನೆ. ನಾನು ಮಾನ್ಯ ಸದಸ್ಯರಾದಂಥ ಮಲ್ಲಾರಿಗೌಡ ಪಾಟೀಲರು ಹೇಳಿದಂಥದ್ದಕ್ಕೆ ನನ್ನ ಮಾತನ್ನು ಅವರು ಸರಿಯಾಗಿ ಏನಾದರೂ ಕೇಳಿಸಿಕೊಂಡಿದ್ದರೆ ಆ ನಂಬಿಕೆಯುಳ್ಳವರು ಬಿಜೆಪಿ ಪಕ್ಷದವರು ಎಂದು ಹೇಳಲಿಲ್ಲ. ಬಿಜೆಪಿ ಪಕ್ಷಕ್ಕೆ ಮೆಂಬರ್‌ಷಿಪ್ ತೆಗೆದುಕೊಂಡಿದ್ದರು ಎಂದು ಅಲ್ಲ. ಆ ನಂಬಿಕೆಯುಳ್ಳಂಥ ಜನ ಇದ್ದಾರೆ. ಕಾಂಗ್ರೆಸ್ ಎಂ.ಎಲ್.ಎ. ಗಳು ಅಂತ ಅಲ್ಲ. ಈ ರಾಷ್ಟ್ರದಲ್ಲಿರತಕ್ಕಂಥ ಬೇಕಾದಷ್ಟು ಜನ ಈ ನಂಬಿಕೆ ಉಳ್ಳಂತವರು ಕಾಂಗ್ರೆಸ್‌ನಲ್ಲಿ ಇದ್ದಾರೆ. ಈ ನಂಬಿಕೆ ಉಳ್ಳಂಥ ಜನ ದಳದಲ್ಲೂ ಇದ್ದಾರೆ. ನಾನು ಇರುವಂತಹ ಪಕ್ಷದಲ್ಲೂ ಇದ್ದಾರೆ, ಆ ಒಂದು ಉದ್ದೇಶದಿಂದ ಹೇಳಿದೆನೆ ಹೊರತು ಇಂತಹವರು ಬಿಜೆಪಿ ಮೆಂಬರ್ ಆಗಿದ್ದಾರೆ ಎಂತಲ್ಲ. ಈ ರಾಷ್ಟ್ರ ಹಿಂದೂಗಳ ರಾಷ್ಟ್ರ ಆಗಬೇಕು ಎನ್ನುವ ನಂಬಿಕೆ ಉಳ್ಳ, ಈ ರಾಷ್ಟ್ರ ಹಿಂದೂಗಳಿಗೆ ಮಾತ್ರ ಸೇರತಕ್ಕದ್ದು ಎಂದು ಹೇಳತಕ್ಕ ಜನ ಇದ್ದಾರೆಂದು ಮಾತ್ರ ನಾನು ಹೇಳಲಿಕ್ಕೆ ಪ್ರಯತ್ನಪಡುತ್ತೇನೆ.

ಉಪಾಧ್ಯಕ್ಷರು:– ಈಗ ಸಭೆಯನ್ನು ಮುಂದೂಡಲ್ಪಟ್ಟು ಮತ್ತೆ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2 ಗಂಟೆ 2 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ೩.೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸಭೆಯು 3–17 ಗಂಟೆಗೆ ಪ್ರಾರಂಭವಾಯಿತು)